RNU AIR DHARWAD

MAY 03, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಜನ ಗಣತಿಯೊಂದಿಗೆ, ಜಾತಿ ಸಮೀಕ್ಷೆ ಸಹ ಕೈಗೊಂಡು, ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಲು, ಕೇಂದ್ರ ಸರ್ಕಾರ ಬದ್ಧ.**
- **ಮೈಸೂರಿನಲ್ಲಿ, ಇಂದು ಮತ್ತು ನಾಳೆ, ಹಲಸು, ಬೆಳವಲ ಹಣ್ಣು ಹಾಗೂ ದೊಡ್ಡ ಬಿಲ್ವ ಪತ್ರೆಯ, ವಿಶೇಷ ಮೇಳ.**
- **ಖೇಲೋ ಇಂಡಿಯಾ: ಧಾರವಾಡ ಜಿಲ್ಲೆಯ, ಉಮೇಶ ಹಾಗೂ ದೀಪಾ, ರಾಷ್ಟ್ರೀಯ ಮಲ್ಲಕಂಬ ಸ್ಪರ್ಧೆಗೆ, ಆಯ್ಕೆ.**
- **ವೇವ್ಸ್ ಶೃಂಗಸಭೆ; ಸಂಸ್ಕೃತಿಯ ಬೆಸುಗೆಯೊಂದಿಗೆ, ತಂತ್ರಜ್ಞಾನದ ಬೆಳವಣಿಗೆಗೆ ಆದ್ಯತೆ.**

<><><>

**ಈಗ ವಾರ್ತೆಗಳ ವಿವರ**

<><><>

**ಮುಂಬರುವ ಜನ ಗಣತಿಯ ಸಂದರ್ಭದಲ್ಲಿ, ಜಾತಿ ಗಣತಿ ಸಹ ನಡೆಸುವ ಮೂಲಕ, ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಲು, ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ, ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು, ಕೇಂದ್ರ ಆಹಾರ, ನಾಗರಿಕ ಸರಬರಾಜು ಖಾತೆ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇ ’ ಸ್ಥಾನಮಾನ ರದ್ದಾದ ಬಳಿಕ, ಭಯೋತ್ಪಾದನಾ ಚಟುವಟಿಕೆಗಳು, ಗಣನೀಯವಾಗಿ ಇಳಿಕೆಯಾಗಿವೆ. ಮಂಗಳೂರಿನಲ್ಲಿ ನಡೆದ ಹತ್ಯೆ ಪ್ರಕರಣಕ್ಕೆ, ರಾಜ್ಯ ಸರ್ಕಾರವೇ ಹೊಣೆ ಎಂದರು.**

<><><>

**ಈ ಮಧ್ಯೆ, ಸುಹಾಸ ಶೆಟ್ಟಿ ಅವರ ಹತ್ಯೆ ಖಂಡಿಸಿ, ದಕ್ಷಿಣಕನ್ನಡ ಜಿಲ್ಲೆಯಲ್ಲಿ, ಅಂಗಡಿ, ಮುಂಗಟ್ಟುಗಳನ್ನು, ಜನ ಸ್ವಯಂಪ್ರೇರಿತರಾಗಿ ಮುಚ್ಚಿ, ಬಂದ್ ಆಚರಿಸಿದರು. ಅಂತ್ಯಕ್ರಿಯೆಯಲ್ಲಿ ಬಿಜೆಪಿ ಮುಖಂಡರು ಪಾಲ್ಗೊಂಡು, 25 ಲಕ್ಷ ರೂಪಾಯಿ ಪರಿಹಾರ, ಕುಟುಂಬಕ್ಕೆ ಪ್ರಕಟಿಸಿದರು. ಮುನ್ನೆಚ್ಚರಿಕೆ ಕ್ರಮವಾಗಿ, ಪೊಲೀಸರು ವ್ಯಾಪಕ ಬಂದೋಬಸ್ತ್ ಕೈಗೊಂಡಿದ್ದರು.**

<><><>

**ರಾಜ್ಯದ ವಿಶ್ವವಿದ್ಯಾಲಯಗಳ, ಪ್ರಾಧ್ಯಾಪಕರ ನಿವೃತ್ತಿಯ ವಯೋಮಿತಿಯನ್ನು, 62 ರಿಂದ 65 ವರ್ಷಕ್ಕೆ ಏರಿಸುವ ಪ್ರಸ್ತಾವ, ರಾಜ್ಯ ಸರ್ಕಾರ ಹೊಂದಿಲ್ಲ ಎಂದು, ಉನ್ನತ ಶಿಕ್ಷಣ ಖಾತೆ ಸಚಿವ ಎಂ.ಸಿ.ಸುಧಾಕರ, ಸ್ಪಷ್ಟ ಪಡಿಸಿದ್ದಾರೆ.**

ಚಿಕ್ಕಬಳ್ಳಾಪುರದಲ್ಲಿ ಮಾತನಾಡಿದ ಅವರು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ, 2 ಸಾವಿರದ 6 ನೂರಕ್ಕೂ ಹೆಚ್ಚು ಬೋಧಕರ ಹುದ್ದೆಗಳು, ಖಾಲಿ ಇವೆ. ಈ ಎಲ್ಲ ಹುದ್ದೆಗಳನ್ನು, ಹಂತ ಹಂತವಾಗಿ ಭರ್ತಿ ಮಾಡುವ ಕ್ರಮಕ್ಕೆ, ಆದ್ಯತೆ ನೀಡಲಾಗುವುದು, ಎಂದರು.

<><><>

ನಿವೃತ್ತಿಯ ವಯೋಮಿತಿಯನ್ನು, ತೆಲಂಗಾಣದ ಮಾದರಿಯಲ್ಲಿ, 65 ವರ್ಷಗಳಿಗೆ ಏರಿಸುವಂತೆ ಕೋರಿ, ನಿವೃತ್ತಿಯ ಅಂಚಿನಲ್ಲಿರುವ ಹಲವು ಪ್ರಾಧ್ಯಾಪಕರು, ನ್ಯಾಯಾಲಯದ ಮೊರೆ ಹೋಗಿದ್ದಾರೆ.

<><><>

ಎಸ್.ಎಸ್.ಎಲ್.ಸಿ. ಪರೀಕ್ಷೆ 1ರ ಫಲಿತಾಂಶ, ಒಟ್ಟಾರೆ ಶೇಕಡ 62 ದಶಾಂಶ 3–4 ರಷ್ಟಾಗಿದೆ. ದಕ್ಷಿಣಕನ್ನಡ ಜಿಲ್ಲೆ ಶೇಕಡ 91 ದಶಾಂಶ 1–2 ಹಾಗೂ ಉಡುಪಿ ಜಿಲ್ಲೆ ಶೇಕಡ 89 ದಶಾಂಶ 9–6 ಫಲಿತಾಂಶ ದಾಖಲಿಸಿ, ಕ್ರಮವಾಗಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿವೆ. ಉತ್ತರಕನ್ನಡ ಮತ್ತು ಶಿವಮೊಗ್ಗ ಜಿಲ್ಲೆ, ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದಿವೆ.

<><><>

ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, '22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿದ್ದಾರೆ. ಈ ಬಾರಿ 327 ಮಕ್ಕಳು 620ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ' ಎಂದು, ತಿಳಿಸಿದರು.

<><><>

ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೂ ಈ ವ ರ್ಷ ಇನ್ನೆರಡು ವಾರ್ಷಿಕ ಪರೀಕ್ಷೆಗಳ ಅವಕಾಶ ನೀಡಲಾಗುತ್ತಿದೆ. ಅನುತ್ತೀರ್ಣಗೊಂಡವರು ಹಾಗೂ ಉತ್ತಮ ಅಂಕ ಲಭಿಸದ ವಿದ್ಯಾರ್ಥಿಗಳು, ಇನ್ನೂ ಎರಡು ಬಾರಿ ಪರೀಕ್ಷೆ ಬರೆದು, ತಮ್ಮ ಫಲಿತಾಂಶ ಸುಧಾರಿಸಿಕೊಳ್ಳಬಹುದಾಗಿದೆ.

<><><>

ಪ್ರಸ್ತುತ, ಎಸ್.ಎಸ್.ಎಲ್.ಸಿ. ಪರೀಕ್ಷೆ 1ರ ಉತ್ತರ ಪತ್ರಿಕೆಗಳ, ಸ್ಕ್ಯಾನ್ ಪ್ರತಿ, ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ, 'ಕರ್ನಾಟಕ 1 ಮೊಬೈಲ್ ಆಪ್' ಮೂಲಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ ಪಡೆಯಲು, ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು, 7ನೇ ತಾರೀಖಿನ ವರೆಗೆ ಅವಕಾಶವಿದೆ.

ಉತ್ತರ ಪತ್ರಿಕೆಗಳ ಮರು ಎಣಿಕೆ ಮತ್ತು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು, ನಾಳೆಯಿಂದ 11ನೇ ತಾರೀಖಿನ ವರೆಗೆ ಅವಕಾಶವಿದೆ.

ಎಸ್.ಎಸ್.ಎಲ್.ಸಿ. 2025ರ ಪರೀಕ್ಷೆ –2 ಅನ್ನು, ಈ ತಿಂಗಳ 26 ರಿಂದ, ಜೂನ್ 2 ವರೆಗೆ ಹಾಗೂ ಪರೀಕ್ಷೆ 3, ಜೂನ್ 23 ರಿಂದ 30ರ ವರೆಗೆ ನಡೆಯಲಿದೆ.

ಪರೀಕ್ಷೆ –2 ಕ್ಕೆ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳಲು, ಇಂದಿನಿಂದ 10ನೇ ತಾರೀಖಿನ ವರೆಗೆ ಅವಕಾಶ ಕಲ್ಪಿಸಲಾಗಿದೆ.

<><><>

ಇಂದು ಮತ್ತು ನಾಳೆ, ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ, ವಿಶೇಷ ಹಲಸು, ಬೆಳವಲ ಹಣ್ಣು ಹಾಗೂ ದೊಡ್ಡ ಬಿಲ್ವ ಪತ್ರೆಯ, ಮೌಲ್ಯವರ್ಧಿತ ಉತ್ಪನ್ನಗಳ ಮೇಳ ಆಯೋಜಿತವಾಗಿದೆ. ಶ್ರೀ ಪಡ್ರೆ ಅವರ ಸಾರಥ್ಯದಲ್ಲಿ, ಕೃಷಿಕರೇ ರೂಪಿಸುವ, 'ಅಡಿಕೆ ಪತ್ರಿಕೆ', 'ಸ್ಟೋನ್ ಆಪಲ್' 'ಬಿಲ್ವ ಜ್ಯೂಸ್'ನ್ನು ಜನಪ್ರಿಯಗೊಳಿಸುವ, ಪ್ರಯತ್ನ ಮಾಡುತ್ತಿದೆ. ದೊಡ್ಡ ಬಿಲ್ವ ಗಿಡಗಳು, ಮಾರಾಟಕ್ಕೂ ಸಿಗಲಿವೆ. ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಮೈಸೂರಿನ ಸಹಜ ಸಮೃದ್ಧದ ವಿಶ್ವಸ್ಥರಾದ, ಜಿ.ಕೃಷ್ಣಪ್ರಸಾದ.

<><><>

ಜಿ.ಕೃಷ್ಣಪ್ರಸಾದ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **X** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ನೀತಿಗಳನ್ನು, ಪ್ರೋತ್ಸಾಹಿಸಬೇಕಿದೆ ಎಂದು, ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಮುಂಬಯಿಯ, ಜಿಯೋ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿತ, ಜಾಗತಿಕ ಶ್ರಾವ್ಯ, ದೃಶ್ಯ ಹಾಗೂ ಮನೋರಂಜನಾ ಶೃಂಗಸಭೆ, ವೇವ್ಸ್ –20'25ನ 2ನೇ ದಿನ, ಜಾಗತಿಕ ಮಾಧ್ಯಮ ಸಂವಾದದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಸಂಸ್ಕೃತಿಯ ಬೆಸುಗೆಯೊಂದಿಗೆ ತಂತ್ರಜ್ಞಾನದ ಬೆಳವಣಿಗೆಗೆ ಆದ್ಯತೆ ನೀಡಿದ್ದು, ಅನ್ವೇ ಣೆ ಮತ್ತು ನವೋದ್ಯಮಗಳಿಗೆ ಹೆಚ್ಚಿನ ಒತ್ತು ನೀಡಲಾಗಿದೆ. ವಿಕಸಿತ ಭಾರತದ ಕನಸನ್ನು ಸಾಕಾರಗೊಳಿಸಲು ನೆರವಾಗಲಿದೆ ಎಂದರು.

<><><>

ವಿದೇಶಾಂಗ ವ್ಯವಹಾರಗಳ ಖಾತೆ ಸಚಿವ ಎಸ್.ಜೈಶಂಕರ್, ಮಾತನಾಡಿ, ಕೃತಕ ಬುದ್ಧಿಮತ್ತೆ, ಉದಯೋನ್ಮುಖ ತಂತ್ರಜ್ಞಾನಗಳ ಜಾಗತಿಕ ಮಾಧ್ಯಮ ಸಹಕಾರದಲ್ಲಿ, ಸೃಜನಶೀಲತೆ, ಸಂಸ್ಕೃತಿ ಹಾಗೂ ಸಹಕಾರ, ಆಧಾರ ಸ್ತಂಭಗಳಾಗಿವೆ ಎಂದರು.

<><><>

ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ, ರಾಜ್ಯ ಸಚಿವ, ಎಲ್.ಮುರುಗನ್ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಂಡಿದ್ದರು.

<><><>

ವೇವ್ಸ್ ಶೃಂಗಸಭೆ ಧ್ಯೇಯ ಸಂಗೀತ 10 ಸೆಕೆಂದುಗಳು

<><><>

ಕನ್ನಡ ಸಾಹಿತ್ಯ ಪರಿಷತ್, 111ನೇ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆ, ಎಚ್. ವಿಶ್ವನಾಥ ಮತ್ತು ಎಂ.ಎಸ್. ಇಂದಿರಾ ದತ್ತಿ ಪ್ರಶಸ್ತಿಗೆ, ಧಾರವಾಡದ ಮನಗುಂಡಿಯ, ಶ್ರೀ ಗುರು ಬಸವ ಮಹಾಮನೆಯ, ಶ್ರೀ ಬಸವಾನಂದ ಸ್ವಾಮೀಜಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 10 ಸಾವಿರ ರೂಪಾಯಿ ನಗದು ಪುರಸ್ಕಾರವನ್ನು ಒಳಗೊಂಡಿದೆ. 5ನೇ ತಾರೀಖು, ಸೋಮವಾರ ಬೆಂಗಳೂರಿನ, ಶ್ರೀ ಕೃಷ್ಣರಾಜ ಪರಿಷತ್ ಮಂದಿರದಲ್ಲಿ, ಸಂಜೆ 5 ಗಂಟೆಗೆ, ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿತವಾಗಿದೆ.

ಪ್ರದೇಶ ಸಮಾಚಾರಕ್ಕಾಗಿ, ದೃಷ್ಟಿ ವಿಶೇಷ ಚೇತನರಾದ, ಶ್ರೀ ಬಸವಾನಂದ ಸ್ವಾಮೀಜಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶ್ರೀ ಬಸವಾನಂದ ಸ್ವಾಮೀಜಿ ಧ್ವನಿ 45 ಸೆಕೆಂದುಗಳು

<><><>

ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು, ಗುಡಗೇರಿ ಸಮೀಪದ ಹರ್ಲಾಪುರದ, ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿ ಉಮೇಶ ಹನುಮಂತಪ್ಪ ದೊಡ್ಡಮನಿ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, 7ನೇ ತರಗತಿ ವಿದ್ಯಾರ್ಥಿನಿ, ದೀಪಾ ಹನುಮಂತಪ್ಪ ದೊಡ್ಡಮನಿ, 18 ವರ್ಷದೊಳಗಿನ ರಾಷ್ಟ್ರ ಮಟ್ಟದ ಖೇಲೋ ಇಂಡಿಯಾ, ಮಲ್ಲಕಂಬ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ನಾಳೆಯಿಂದ ಬಿಹಾರದ ಬೋಧ ಗಯಾದಲ್ಲಿ ಆಯೋಜಿತ 7ನೇ ರಾಷ್ಟ್ರ ಮಟ್ಟದ ಖೇಲೋ ಇಂಡಿಯಾ ಯೂಥ್ ಗೇಮ್ಸ್‌ನಲ್ಲಿ ಅವರು, ಪಾಲ್ಗೊಳ್ಳಲಿದ್ದಾರೆ.

<><><>

ಬಾಗಲಕೋಟೆಯ ತುಳಸಿಗೇರಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ, ರಾಜ್ಯ ಮಟ್ಟದ ಖೇಲೋ ಇಂಡಿಯಾ ಯೂಥ್ ಗೇಮ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ, ರಾಷ್ಟ್ರೀಯ ತಂಡಕ್ಕೆ ಉಮೇಶ ಹಾಗೂ ದೀಪಾ ಆಯ್ಕೆಯಾಗಿದ್ದಾರೆ.

<><><>

ಮಲ್ಲಕಂಬದ ಹಿರಿಯ ಪಟು, ಅನನ್ಯಾ ಹಿರೇಮಠ ಅವರಲ್ಲಿ ತರಬೇತಿ ಪಡೆಯುತ್ತಿದ್ದಾರೆ.

<><><>

1991 ಮೇ 3 ರಂದು, ತನ್ನ ಪ್ರಸಾರ ಸೇವೆ ಆರಂಭಿಸಿದ, ಆಕಾಶವಾಣಿಯ ಚಿತ್ರದುರ್ಗ ಕೇಂದ್ರ, ಇಂದಿಗೆ 35ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದೆ. ಚಿತ್ರದುರ್ಗದ ಕೆಳಗೋಟೆಯ, ಆಕಾಶವಾಣಿ ಕೇಂದ್ರಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಸಂಸದ ಗೋವಿಂದ ಕಾರಜೋಳ ಅವರು ಇಂದು ಭೇಟಿ ನೀಡಿ, ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲೂಕಿನ, ಇಂಗಳಿ ಗ್ರಾಮದಲ್ಲಿ, ಮೂವರು ಬಾಲಕರು ಕೃಷಿ ಹೊಂಡದಲ್ಲಿ ಮುಳುಗಿ, ಸಾವನ್ನಪ್ಪಿದ ದುರಂತ ಘಟನೆ, ಜರುಗಿದೆ.

<><><>

ಹಾಸನ ಜಿಲ್ಲೆ, ಸಕಲೇಶಪುರ ತಾಲೂಕಿನ, ಬೈಕೆರೆ ಗ್ರಾಮದ ಸುಖ ಕಾಡಾನೆ ದಾಳಿಯಿಂದ ಮೃತಪಟ್ಟ ಹಿನ್ನೆಲೆ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಅವರ ನಿವಾಸಕ್ಕೆ ತೆರಳಿ, ಕುಟುಂಬಕ್ಕೆ ಸಾಂತ್ವನ ಹೇಳಿದರು.

<><><>

ಪೂಜ್ಯ ಶ್ರೀ ಶಂಕರಾಚಾರ್ಯರ ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಿದ, ವರದಿಗಳು ಬಂದಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಜನ ಗಣತಿಯೊಂದಿಗೆ, ಜಾತಿ ಸಮೀಕ್ಷೆ ಸಹ ಕೈಗೊಂಡು, ಎಲ್ಲ ಸಮುದಾಯಗಳಿಗೆ ನ್ಯಾಯ ಒದಗಿಸಲು, ಕೇಂದ್ರ ಸರ್ಕಾರ ಬದ್ಧ.
- ಮೈಸೂರಿನಲ್ಲಿ, ಇಂದು ಮತ್ತು ನಾಳೆ, ಹಲಸು, ಬೆಳವಲ ಹಣ್ಣು ಹಾಗೂ ದೊಡ್ಡ ಬಿಲ್ವ ಪತ್ರೆಯ, ವಿಶೇಷ ಮೇಳ.
- ಖೇಲೋ ಇಂಡಿಯಾ: ಧಾರವಾಡ ಜಿಲ್ಲೆಯ, ಉಮೇಶ ಹಾಗೂ ದೀಪಾ, ರಾಷ್ಟ್ರೀಯ ಮಲ್ಲಕಂಬ ಸ್ಪರ್ಧೆಗೆ, ಆಯ್ಕೆ.
- ವೇವ್ಸ್ ಶೃಂಗಸಭೆ: ಸಂಸ್ಕೃತಿಯ ಬೆಸುಗೆಯೊಂದಿಗೆ, ತಂತ್ರಜ್ಞಾನದ ಬೆಳವಣಿಗೆಗೆ ಆದ್ಯತೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>